ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು

ಸಿ.ಸಿ. ನಂಃ **21/2022**

ಪಿರ್ಯಾದಿ : ಶ್ರೀ ಗಣೇಶ ಃಬಿನ್ಃ ಶಂಕರ,
33 ವರ್ಷ, ಹೊಳೇಬೀದಿ,
ಬೇಲೂರು ಟೌನ್, ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

ವಿರುದ್ಧ

ಆರೋಪಿ : ಶ್ರೀ ಬಿ.ಎಸ್. ಶ್ರೀನಿವಾಸ
ಃಬಿನ್ಃ ಬಿ.ವಿ. ಸತ್ಯನಾರಾಯಣ,
**48** ವರ್ಷ, ಎಸ್.ಇ.ಎಸ್. ಶಾಲೆ,
ಮೂಡಿಗೆರೆ ರಸ್ತೆ, ಬೇಲೂರು ಟೌನ್,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

## ಃ ಆರೋಪಣೆಯ ಸಾರಾಂಶ ಃ

ಪಿರ್ಯಾದಿ ಮತ್ತು ಆರೋಪಿಯಾದ ನೀವು ಪರಿಚಯದವರಾಗಿದ್ದು ಉತ್ತಮ ಹಣಕಾಸಿನ ಸಂಬಂಧವನ್ನು ಹೊಂದಿರುತ್ತಾರೆ. ಆರೋಪಿಯಾದ ನೀನು ದಿನಾಂಕಃ 10.04.2019 ರಂದು ಪಿರ್ಯಾದಿ ಹತ್ತಿರ ಬಂದು ಆರೋಪಿಯಾದ ನಿನ್ನ ಮಕ್ಕಳ ವಿದ್ಯಾಭ್ಯಾಸ ಮತ್ತು ಸಂಸಾರಕ್ಕಾಗಿ ಮಾಡಿರುವ ಕೈಸಾಲ ತೀರುವಳಿ ಮಾಡುವ ಉದ್ದೇಶದಿಂದ ರೂ. 1,80,000/– ರೂಗಳ ಹಣದ ಅವಶ್ಯಕತೆ ಇದೆ ಎಂದು ಕೇಳಿದ್ದು, ಪಿರ್ಯಾದಿಯು ಆರೋಪಿಯಾದ ನಿನ್ನ ಕೋರಿಕೆಯನ್ನು ಮನ್ನಿಸಿ ಅಂದೇ ನಗದಾಗಿ ರೂ.1,80,000/– ಹಣವನ್ನು ಸಾಲವಾಗಿ ಆರೋಪಿಯಾದ ನಿನಗೆ ನೀಡಿದ್ದು, ಆರೋಪಿಯಾದ ನೀನು ಈ ಸಾಲದ ಹಣವನ್ನು ತೀರಿಸುವ ಸಲುವಾಗಿ ಮತ್ತು ಹಣದ ಭದ್ರತೆಗಾಗಿ ಆರೋಪಿಯಾದ ನೀನು ಖಾತೆ ಹೊಂದಿರುವ ಭಾರತೀಯ ಸ್ಟೇಟ ಬ್ಯಾಂಕ್, ಬೇಲೂರು ಶಾಖೆಯ ಚೆಕ್ ನಂಃ880924 ರಲ್ಲಿ ಆರೋಪಿಯಾದ ನೀನು ಸಹಿ ಮಾಡಿ ರೂ.1,80,000/– ಗಳನ್ನು ನಮೂದಿಸಿ ದಿನಾಂಕಃ 10.07.2019 ರಂದು ಅಥವಾ ನಂತರ

ಮೇಲ್ಕಂಡ ಬ್ಯಾಂಕಿಗೆ ಹಾಜರುಪಡಿಸಿ ಹಣ ಪಡೆದುಕೊಳ್ಳುವಂತೆ ತಿಳಿಸಿ ಚೆಕ್ಕನ್ನು ಪಿರ್ಯಾದಿಗೆ ನೀಡಿರುತೀರಿ. ಅದರಂತೆ ಪಿರ್ಯಾದಿಯು ದಿನಾಂಕಃ 10.07.2019 ರಂದು ಚೆಕ್ಕನ್ನು ನಗಧೀಕರಿಸಿಕೊಳ್ಳಲು ಪಿರ್ಯಾದಿಯು ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಬೇಲೂರು ಶಾಖೆಯ ಮೂಲಕ ಹಾಜರಿಸಿದಾಗ, ಆರೋಪಿಯಾದ ನಿನ್ನ ಖಾತೆಯಲ್ಲಿ **"Exeeds Arrangement"** ಎಂಬ ಹಿಂಬರಹದೊಂದಿಗೆ ದಿನಾಂಕಃ 12.07.2019 ರಂದು ವಾಪಸ್ಸು ನೀಡಿರುತ್ತಾರೆ. ಆನಂತರ ಪಿರ್ಯಾದಿಯು ಆರೋಪಿಯಾದ ನಿನ್ನನ್ನು ಸಂಪರ್ಕಿಸಿ ಏಕೆ ಈ ರೀತಿ ನನ್ನಿಂದ ಹಣವನ್ನು ಪಡೆದುಕೊಂಡು ಚೆಕ್ಕನ್ನು ನೀಡಿರುತ್ತೀರಿ ಎಂದು ಕೇಳಿದ್ದಕ್ಕೆ ಆರೋಪಿಯಾದ ನೀನು ಉಡಾಫೆ ಉತ್ತರವನ್ನು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕಃ06.08.2019 ರಂದು ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ನೋಟಿಸ್‌ನ್ನು ಆರೋಪಿಯಾದ ನನಗೆ ಜಾರಿ ಮಾಡಿದ್ದು, ಸದರಿ ನೋಟೀಸ್‌ನ್ನು ಆರೋಪಿಯಾದ ನಿನಗೆ ದಿನಾಂಕಃ 07.08.2019 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀನು ಇದೂವರೆಗೂ ಯಾವುದೇ ಉತ್ತರವನ್ನಾಗಲೀ, ಹಣವನ್ನಾಗಲೀ ಪಿರ್ಯಾದುದಾರನಿಗೆ ನೀಡಿರುವುದಿಲ್ಲ. ಆರೋಪಿಯಾದ ನೀನು ನಿನ್ನ ಖಾತೆಯಲ್ಲಿ ಚೆಕ್ ಹಣವನ್ನು ಮಾನ್ಯ ಮಾಡುವಷ್ಟು ಹಣವಿಲ್ಲದಿದ್ದರೂ ಪಿರ್ಯಾದಿಗೆ ಚೆಕ್ ಅನ್ನು ನೀಡಿ ಪಿರ್ಯಾದುದಾರರಿಂದ ಸಾಲವಾಗಿ ಪಡೆದ ಹಣವನ್ನು ನೀಡದೇ, ಮೋಸ ಮಾಡುವ ಉದ್ದೇಶದಿಂದ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜುಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

ಪ್ರಶ್ನೆಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

**ಸ್ಥಳ : ಬೇಲೂರು**
**ದಿನಾಂಕ : 12.03.2025.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಬೇಲೂರು..**